## ಯುವತಿಯರ ರಕ್ಷಣೆಗೆ 'ಫೈಟ್ ಬ್ಯಾಕ್'




ದೆಹಲಿಯಲ್ಲಿ ಯುವತಿಯ ಮೇಲೆ ನಡೆದ ಬರ್ಬರ ಸಾಮೂಹಿಕ ಅತ್ಯಾಚಾರ ಪ್ರಕರಣದ ನಂತರ ದೇಶದ ಪ್ರತಿಯೊಬ್ಬ ಮಹಿಳೆಗೂ ಸುರಕ್ಷತೆ ಬಗ್ಗೆ ಆತಂಕ ಮೂಡಿದೆ. ಹೀಗಾಗಿ ಆತ್ಮರಕ್ಷಣೆಗೆಂದೇ ಕ್ಯಾನ್‌ವಾಸ್‌ಎಂ 'ಫೈಟ್ ಬ್ಯಾಕ್' ಎಂಬ ಅಪ್ಲಿಕೇಶನ್ ಹೊರತಂದಿದೆ.

ಈ ಅಪ್ಲಿಕೇಶನ್ ಮೂಲಕ ತನ್ನ ಕುಟುಂಬದ ಸದಸ್ಯರು ಅಥವಾ ಸ್ನೇಹಿತರಿಗೆ ಎಸ್‌ಒಎಸ್ ಸಂದೇಶಗಳನ್ನು ಕಳಿಸಬಹುದು. ಅಂದರೆ ಅಪಾಯಕಾರಿ ಪರಿಸ್ಥಿತಿ ಎದುರಾದಾಗ ಪ್ಯಾನಿಕ್ ಬಟನ್ ಒತ್ತಿದರಾಯಿತು. ಅದು ಜಿಪಿಎಸ್ ತಂತ್ರಜ್ಞಾನ ಬಳಸಿ ಬೇಕಾದ ವ್ಯಕ್ತಿಗಳ ಮೊಬೈಲ್ ಸಂಪರ್ಕಿಸುತ್ತದೆ. ಜೊತೆಗೆ ದೆಹಲಿಯಲ್ಲಿ ಪೊಲೀಸರನ್ನೂ ಎಚ್ಚರಿಸಲು ಅವರ ಜೊತೆ ಕಂಪೆನಿ ಮಾತುಕತೆ ನಡೆಸುತ್ತಿದೆ. ಇದು ದೆಹಲಿಯಲ್ಲಿ ಉಚಿತ. ಉಳಿದ ಕಡೆ ಸೇವೆಗೆ ಮಾಸಿಕ ನೂರು ರೂಪಾಯಿ ಪಾವತಿಸಬೇಕು. ಸದ್ಯ ಆ್ಯಂಡ್ರಾಯ್ಡ್, ಬ್ಲ್ಯಾಕ್‌ಬೆರಿ ಹಾಗೂ ಸಿಂಬಿಯಾನ್ ವ್ಯವಸ್ಥೆಯ ಮೊಬೈಲ್‌ಗಳಲ್ಲಿ ಲಭ್ಯವಿದ್ದು, ಬೇಸಿಕ್ ಫೀಚರ್ ಫೋನ್‌ನಲ್ಲೂ ಈ ಸೇವೆಯನ್ನು ನೀಡಲು ಕಂಪೆನಿ ಯತ್ನ ನಡೆಸಿದೆ.

## ಕಾರ್ ಕೀಯಾಗಿ ಸ್ಮಾರ್ಟ್‌ಫೋನ್

ಸ್ಮಾರ್ಟ್‌ಫೋನ್ ಅನ್ನು ಕಾರ್ ಕೀಲಿಕೈನಂತೆ ಬಳಸಬಹುದು ಎಂಬುದು ಈಗಾಗಲೇ ಪ್ರಾಯೋಗಿಕವಾಗಿ ಸಾಬೀತಾಗಿದ್ದರೂ ನಿತ್ಯ ಬಳಕೆಗೆ ಕೆಲವೊಂದು ಅಡೆತಡೆಗಳಿವೆ. ಹಲವು ದಿನಗಳ ಪ್ರಯತ್ನಗಳ ನಂತರ ಹ್ಯುಂಡೈ ಎನ್‌ಎಫ್‌ಸಿ (ನೀಯರ್ ಫೀಲ್ಡ್ ಕಮ್ಯುನಿಕೇಶನ್) ಬಳಸಿ ಸ್ಮಾರ್ಟ್‌ಫೋನ್/ ಕಾರ್ ಕೀಲಿಕೈ ಅನ್ನು ಅಭಿವೃದ್ಧಪಡಿಸಿದೆ.

ಬ್ಲ್ಯೂಟೂಥ್ ತಂತ್ರಜ್ಞಾನದ ಬದಲಾಗಿ ತಂತಿರಹಿತ ಎನ್‌ಎಫ್‌ಸಿ ಬಳಸಲಾದ ಸ್ಮಾರ್ಟ್‌ಫೋನ್ ಅನ್ನು ಕಾರಿನ ಕಿಟಕಿ ಮೇಲಿರುವ ಸಣ್ಣದಾದ ಟ್ಯಾಗ್ ಮುಂದೆ ಆಚೀಚೆ ಆಡಿಸಿದರೆ ಕಾರಿನ ಬಾಗಿಲು ತೆರೆದುಕೊಳ್ಳುತ್ತದೆ ಹಾಗೂ ಲಾಕ್ ಆಗುತ್ತದೆ. ಹ್ಯುಂಡೈನ ಐ30 ಕಾರಿನ ಮೇಲೆ ಇದು ಪ್ರಾಯೋಗಿಕವಾಗಿ ಯಶಸ್ವಿಯಾಗಿದೆ. ಆದರೆ ಗ್ರಾಹಕರಿಗೆ ಇನ್ನೆರಡು ವರ್ಷಗಳಲ್ಲಿ ಲಭ್ಯ ಎನ್ನುತ್ತದೆ ಕಂಪೆನಿ. ಕಾರಿನ ಸೀಟ್ ಹೊಂದಾಣಿಕೆ, ಕನ್ನಡಿ ಹೊಂದಾಣಿಕೆ ಮೊದಲಾದವುಗಳ ಬಗ್ಗೆಯೂ ಈ ಸ್ಮಾರ್ಟ್‌ಫೋನ್‌ನಲ್ಲಿ ವಿವರ ನೀಡಲಾಗಿದ್ದು, ಚಾಲಕರು ಬಳಸಬಹುದು.




## 'ಕೀ' ಕೀಲಿಮಣೆ

ಟಚ್‌ಸ್ಕ್ರೀನ್ ಫೋನ್‌ನಲ್ಲಿ ಕೀಲಿಮಣೆ ಮೇಲೆ ಕೈಯಾಡಿಸುವುದೇ ಒಂದು ವಿಶಿಷ್ಟ ಅನುಭವ. ಇದಕ್ಕಾಗೇ ಸ್ವೈಪ್, ಸ್ವಿಫ್ಟ್‌ಕೀ ಮೊದಲಾದ ಕೀಲಿಮಣೆಗಳ ಅಪ್ಲಿಕೇಶನ್‌ಗಳಿವೆ. ಇತ್ತೀಚೆಗೆ 'ಕೀ' ಅಪ್ಲಿಕೇಶನ್ ಅನ್ನು 1.2 ಆವೃತ್ತಿಗೆ ಮೇಲ್ದರ್ಜೆಗೇರಿಸಲಾಗಿದೆ. ಇದರಲ್ಲಿ ಕೆಲವು ಅಕ್ಷರಗಳನ್ನು ಟೈಪ್ ಮಾಡಿದರೆ ಸಾಕು, ಮುಂದಿನ ಶಬ್ದವನ್ನು ತಾನೇ ಹೇಳುತ್ತದೆ. ಇದು 34 ಭಾಷೆಗಳನ್ನು ಸಪೋರ್ಟ್ ಮಾಡುವುದಲ್ಲದೇ, ಸ್ಪ್ಲಿಟ್ ಲೇಔಟ್, ವಿವಿಧ ಆಕಾರದ ಅಕ್ಷರಗಳು, ಬಣ್ಣಗಳು ದೊರೆಯುತ್ತವೆ. ಆ್ಯಂಡ್ರಾಯ್ಡ್ 21 ಆವೃತ್ತಿಯ ಮೊಬೈಲ್‌ನಲ್ಲಿ ಇದು ಲಭ್ಯ. ಇದನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.




## ಬ್ಲ್ಯೂಟೂತ್‌ನಿಂದ ಎಲ್‌ಇಡಿ ದೀಪಗಳ ನಿಯಂತ್ರಣ

ಎಲ್‌ಇಡಿ ದೀಪಗಳನ್ನು ಸ್ಮಾರ್ಟ್‌ಫೋನ್, ಕಂಪ್ಯೂಟರ್ ಅಥವಾ ಟ್ಯಾಬ್ಲೆಟ್‌ನಲ್ಲಿ ಬ್ಲ್ಯೂಟೂತ್ ಸ್ಮಾರ್ಟ್ ವೈರ್‌ಲೆಸ್ ತಂತ್ರಜ್ಞಾನ ಮೂಲಕವೇ ನಿಯಂತ್ರಿಸಬಹುದು. ಇಂತಹ ರೋಬೊಸ್ಮಾರ್ಟ್ ವೈರ್‌ಲೆಸ್ ಎಲ್‌ಇಡಿ ವ್ಯವಸ್ಥೆಯನ್ನು ಸ್ಮಾರ್ಟ್ ಹೋಂ ಲ್ಯಾಬ್ಸ್ ಅಭಿವೃದ್ಧಿಪಡಿಸಿದೆ.

ಆ್ಯಂಡ್ರಾಯ್ಡ್ ಮತ್ತು ಐಒಎಸ್‌ನಲ್ಲಿ ಈ ಅಪ್ಲಿಕೇಶನ್ ಲಭ್ಯ. ಪ್ರಕಾಶಮಾನ, ಟೈಮರ್ ಮೊದಲಾದವುಗಳನ್ನು ಇದರಲ್ಲಿ ನಿಯಂತ್ರಿಸಬಹುದು. ಇನ್ನೂ ಮನೆಯ ಹೊರಗಡೆ ಇರುವಂತೆಯೇ ದೀಪಗಳನ್ನು ನಿಮ್ಮ ಸ್ಮಾರ್ಟ್‌ಫೋನ್ ಮೂಲಕ ಹೊತ್ತಿಸಬಹುದು. ಹಾಗೆಯೇ ಗೇಟ್ ದಾಟಿದ ನಂತರ ಇವುಗಳನ್ನು ನಿಧಾನವಾಗಿ ಆರಿಸುವ ವ್ಯವಸ್ಥೆಯೂ ಇದೆ.

■ ಎಸ್. ತುಂಬೆ